Date : 26-9-2015

# ಐವರಿಕೋಸ್ಟ್‌ನಿಂದ ಕಚ್ಚಾ ಗೇರುಬೀಜ ಜಾಗತಿಕ ರಫ್ತು ಹೆಚ್ಚಳ

ಏಶ್ಯಾದ ರಾಜ್ಯಗಳಿಂದ ಆಹಾರ ಘಟಕವಾಗಿ ಗೇರುಬೀಜದ ಬೇಡಿಕೆ ಐವರಿಕೋಸ್ಟ್‌ನ ರೈತರ ಅರ್ಥಿಕ ಪ್ರಗತಿಗೆ ಸಹಾಯಕವಾಗಿದೆ. ಪಶ್ಚಿಮ ಆಫ್ರಿಕಾದ ಈ ರಾಜ್ಯ ಕಚ್ಚಾಗೋಡಂಬಿ ಉತ್ಪಾದನೆಯಲ್ಲಿ ಜಾಗತಿಕ ಹೆಚ್ಚು ಕಚ್ಚಾ ಗೇರುಬೀಜ ಉತ್ಪಾದಿಸುವ ಭಾರತವನ್ನು ಹಿಂದಿಕ್ಕುವ ಹಾದಿಯಲ್ಲಿದೆ. ಹಿಂದಿನ ಒಂದು ದಶಕದಲ್ಲಿ ಐವರಕೋಸ್ಟ್‌ನ ಕಚ್ಚಾಗೇರುಬೀಜ ಉತ್ಪಾದನೆ ಮೂರುಪಟ್ಟು ಹೆಚ್ಚಳವಾಗಿದೆ ಮತ್ತು 2011ರ ನಾಗರಿಕ ಯದ್ಧದ ನಂತರ ಇದು ಇನ್ನಷ್ಟು ವೇಗಪಡೆದಿದೆ. ಯು.ಎಸ್, ಚೈನಾ ಭಾರತಗಳಲ್ಲಿ ಹೆಚ್ಚಿನ ಗೋಡಂಬಿ ಬಳಕೆಯ ನಂತರ ಕಚ್ಚಾಗೇರುಬೀಜದ ದರ ಹೆಚ್ಚಳವಾಗಿದೆ. ಏಶ್ಯಾದ ಅಡುಗೆಗಳಲ್ಲಿ ಹೆಚ್ಚು ಗೋಡಂಬಿ ಬಳಕೆಯಾಗುತ್ತಿದ್ದು ಕೆಲವು ಕಂಪೆನಿಗಳಲ್ಲಿ ಡೈರಿಯೇತರ ಪಾನೀಯ ಮತ್ತು ಐಸ್‌ಕ್ರೀಂನಲ್ಲೂ ಬಳಕೆಯಾಗುತ್ತಿದೆ.

ನೆಲಗಡಲೆ, ಪಿಸ್ತಾಚಿಲೋ ವಾಲ್‌ನಟ್ ಮತ್ತು ಹಾಜಲ್‌ನಟ್‌ಗಳೊಂದಿಗೆ ಸಂಬಂಧಿತ ಪರ್ಯಾಯವಾಗಿ ಗೋಡಂಬಿ ಬಳಕೆಯಾಗುತ್ತಿದೆ. ಅತೀ ಹೆಚ್ಚು ಬಾದಾಮಿ ಉತ್ಪಾದಕ ದೇಶವಾದ ಕ್ಯಾಲಿಪೋರ್ನಿಯಾದ ಬರಗಾಲದಿಂದ ಹಿಂದಿನೆರಡು ವರ್ಷಗಳಲ್ಲಿ ಬಾದಾಮಿ ದರ ಹೆಚ್ಚಳವಾಗಿದೆ. ಕೊಕ್ಕೋ ಅತಿ ಹೆಚ್ಚು ರಫ್ತು ದೇಶವಾದ ಐವರೀಕೋಸ್ಟ್‌ನಲ್ಲಿ ಈಗ ಗೋಡಂಬಿ ರಫ್ತು 50 ಶೇಕಡಾ ಹೆಚ್ಚಳ ಕಂಡಿದೆ. ಅಲ್ಲಿನ ಎಲ್ಲಾ ಕಚ್ಚಾ ಗೋಡಂಬಿ ಉತ್ಪಾದನೆ 625000ಟನ್‌ಗಳಿಗೆ ಮುಟ್ಟಿದ್ದು ಮುಂದಿನ ವರ್ಷ 7ಲಕ್ಷ ಟನ್ ಉತ್ಪಾದನೆಯ ಗುರಿಯೊಂದಿಗೆ 2017ರೊಳಗೆ ಭಾರತದ ಕಚ್ಚಾ ಗೋಡಂಬಿ ಬೆಳೆಗಿಂತ ಹೆಚ್ಚು ಬೆಳೆಯುವ ಗುರಿ ಹೊಂದಿದೆಯೆನ್ನಲಾಗಿದೆ. ಅಲ್ಲಿ ಕಚ್ಚಾ ಗೋಡಂಬಿ ಉತ್ಪಾದನೆ 2005ರಲ್ಲಿ 185000 ಟನ್‌ಗಳಾಗಿತ್ತು.